ಅಧ್ಯಕ್ಷರು :— ನಮ್ಮ ಮುಂದೆ ಇನ್ನು ಎಂಟು ಪ್ರಶ್ನೆಗಳಿವೆ. ಇನ್ನು ಇರುವುದು ಹತ್ತು ನಿಮಿಷ. ಸಭೆ 10-40ಕ್ಕೆ ಪ್ರಾರಂಭವಾಗಿದೆ. ಹತ್ತು ನಿಮಿಷದಲ್ಲಿ ಇನ್ನು ಇರುವ ಎಂಟು ಪ್ರಶ್ನೆಗಳನ್ನು ನಾನು ಹೇಗೆ ಮುಗಿಸಲಿ? ಸದಸ್ಯರುಗಳು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಕೃಷ್ಣಮೂರ್ತಿಯವರು ಹೇಳಿದ್ದಕ್ಕೆ ನಾನು ಇಷ್ಟೇ ಪ್ರತಿಕ್ರಿಯಿಸುತ್ತೇನೆ. ಆ ಭಾಗದಲ್ಲಿ ವಿಶೇಷವಾಗಿರತಕ್ಕ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಅವರು ಹೆಸರನ್ನು ಇಡುವುದು ಬೇಡ. ನಾವೇನು ಕಾರ್ಯಕ್ರಮಗಳನ್ನು ಕೈಗೆ ಎತ್ತಿಕೊಳ್ಳುತ್ತಿದ್ದೇವೆ. ಅವುಗಳನ್ನು ನೋಡಿ ಅವುಗಳ ಬಗ್ಗೆ ತಮಗೆ ಮೆಚ್ಚುಗೆಯಾದರೆ ಮೆಚ್ಚಿಕೊಂಡು ಸಹಕರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ರಾಜ್ಯ ಸರ್ಕಾರ ಪಡೆದುಕೊಂಡ ವಿವಿಧ ಸಾಲದ ವಿವರ.

259 (2891) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮಾಂತರ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಪಡೆದುಕೊಂಡಿರುವ ವಿವಿಧ ಆಂತರಿಕ ಸಾಲ ಕೇಂದ್ರದ ಸಾಲ ವಿದೇಶಿ ಸಾಲ ಹಾಗೂ ಇತರ ಸಾಲ 31.3.2001ಕ್ಕೆ ಎಷ್ಟು?

ಆ) ಈ ಎಲ್ಲಾ ಸಾಲಗಳಿಗೆ 2000-2001ರಲ್ಲಿ 31.3.2001ಕ್ಕೆ ಕೊಟ್ಟ ಬಡ್ಡಿ ಎಷ್ಟು ಹಾಗೂ ಕೊಡಬೇಕಾದ ಬಡ್ಡಿ ಬಾಕಿ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

ಅ) ರಾಜ್ಯ ಸರ್ಕಾರವು ವಿದೇಶಿ ಸಾಲಗಳನ್ನು ನೇರವಾಗಿ ಪಡೆಯುವುದಿಲ್ಲ ವಿದೇಶಿ ಸಾಲ ಕೇಂದ್ರ ಸರ್ಕಾರದ ಮುಖಾಂತರ ಬರುತ್ತವೆ. ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಪಡೆದಿರುವ ಸಾಲದ ವಿವರಗಳು ಈ ಕೆಳಕಂಡಂತೆ ಇರುತ್ತವೆ

I) ಆಂತರಿಕ ಸಾಲಗಳು (ರೂ. ಕೋಟಿಗಳಲ್ಲಿ)

	1998--99 ಲೆಕ್ಕ	1999-2000 ಲೆಕ್ಕ	2000-01 ಪರಿಷ್ಕೃತ ಅಂದಾಜು
1) ಮಾರುಕಟ್ಟೆ ಸಾಲ	701-69	903.88	835.58
2) ಎಲ್.ಐ.ಸಿ.	10.00	243.26	105.43

1	2	3	4	5
3)	ಬಿ.ಐ.ಸಿ.	--	--	36.10
4)	ನಬಾರ್ಡ್	139.89	141.17	203.00
5)	ಎನ್.ಸಿ.ಡಿ.ಸಿ.	20.38	6.69	13.65
II)	ಕೇಂದ್ರ ಸರ್ಕಾರದ ಸಾಲಗಳು			
1)	ಯೋಜನೇತರ ಸಾಲ	801.44	953.18	1208.65
2)	ರಾಜ್ಯ ಯೋಜನೆಗಳಿಗೆ ಸಾಲ	726.58	900.73	1039.60
3)	ಕೇಂದ್ರ ವಲಯ ಯೋಜನೆಗಳಿಗೆ ಸಾಲ	0.13	0.17	0.55
4)	ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಾಲ	23.85	23.57	27.61
	ಒಟ್ಟು	2423.96	3172.65	3460.17

ವಿದೇಶಿ ನೆರವಿನ ಹಣವು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾದ ಮುಖಾಂತರ ಬರುತ್ತದೆ. ವಿದೇಶಿ ಸಾಲದ ವಿವರಗಳು ಈ ಕೆಳಕಂಡಂತೆ ಇರುತ್ತದೆ:

1998 - 1999	313.60
1999 - 2000	460.65
2000 - 2001	565.98
ಒಟ್ಟು	1340.23*)

*) ಇದು ರಾಜ್ಯ ಯೋಜನೆ ಸಾಲಗಳಲ್ಲಿ ಸೇರಿರುತ್ತದೆ.

ದಿನಾಂಕ: 31.3.2001ರ ಅಂತ್ಯಕ್ಕೆ ರಾಜ್ಯ ಸರ್ಕಾರವು ಪಡೆದಿರುವ ಒಟ್ಟು ಸಾಲ ರೂ. 18090.53 ಕೋಟಿಗಳು.

ಅ) ಈ ಎಲ್ಲಾ ಸಾಲಗಳಿಗೆ 2000-2001ರಲ್ಲಿ 31.3.2001ರ ಅಂತ್ಯಕ್ಕೆ ಪಾವತಿಸಿದ ಬಡ್ಡಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

i) ಆಂತರಿಕ ಸಾಲ	(ರೂ. ಕೋಟಿಗಳಲ್ಲಿ) ವರ್ಷ 2000-01 (ಪರಿಶ್ಕೃತ)
1) ಮಾರುಕಟ್ಟೆ ಸಾಲ	476.68
2) ಎಲ್.ಐ.ಸಿ.	44.63
3) ಬಿ.ಐ.ಸಿ.	9.07
4) ನಬಾರ್ಡ್	53.11
5) ಎನ್.ಡಿ.ಸಿ.	15.00
II) ಕೇಂದ್ರ ಸರ್ಕಾರದಿಂದ ಸಾಲ	
1) ಯೋಜನೇತರ	782.29
2) ರಾಜ್ಯ ಯೋಜನೆ ಸಾಲ	561.93
3) ಕೇಂದ್ರ ಪುರಸ್ಕೃತ ಯೋಜನೆ	15.90
3) ಕೇಂದ್ರ ವಲಯ ಯೋಜನೆ	7.75
4) 83-84 ಪೂರ್ವ ಸಾಲಗಳು	15.24
ಒಟ್ಟು	1981.60

ರಾಜ್ಯ ಸರ್ಕಾರವು ನೀಡಬೇಕಾದ ಬಡ್ಡಿಯನ್ನು ಷರತ್ತು ನಿಬಂಧನೆಗಳಂತೆ ಆಯಾ ಕಾಲಕ್ಕೆ ಆಯವ್ಯಯದಲ್ಲಿ ಅವಕಾಶ ಒದಗಿಸುವ ಮೂಲಕ ಬಡ್ಡಿ ಮರು ಪಾವತಿ ಮಾಡಲಾಗುವುದು. ಕೊಡಬೇಕಾದ ಬಡ್ಡಿ ಬಾಕಿ ಯಾವುದು ಇರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೇ, ಇದು ರಾಜ್ಯದ ಒಂದು ಆರ್ಥಿಕ ಪರಿಸ್ಥಿತಿಗೆ ಕೈಗನ್ನಡಿ ಹಿಡಿದಂಥ ಒಂದು ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. 31.03.2001ಕ್ಕೆ ನಮ್ಮ ರಾಜ್ಯದ ವಿವಿಧ ಆಂತರಿಕ ಸಾಲ, ಕೇಂದ್ರದ ಸಾಲ, ವಿದೇಶಿ ಸಾಲ ಬೇರೆ ಬೇರೆ ಮೂಲಗಳ ಸಾಲ ಎಷ್ಟಿದೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಇಲ್ಲಿ ಮುಖ್ಯಮಂತ್ರಿಗಳು 31.03.2001 ಅಂತ್ಯಕ್ಕೆ ರಾಜ್ಯ ಸರ್ಕಾರ ಪಡೆದಿರುವ ಒಟ್ಟು ಸಾಲ 18090.53 ಕೋಟಿ ರೂಪಾಯಿ. ಇದರಲ್ಲಿ ಆಂತರಿಕ ಸಾಲಗಳು 2423.96 ಕೋಟಿ ರೂಪಾಯಿಗಳು. ಆಮೇಲೆ ವಿದೇಶಿ ಸಾಲಗಳು 1340.23 ಕೋಟಿ ರೂಪಾಯಿಗಳು. ಮತ್ತೆ ಇನ್ನೊಂದು ಪ್ರಶ್ನೆಯಲ್ಲಿ ಬಡ್ಡಿ ಹಣ

ಕೊಟ್ಟಿರುವುದು 1981.60 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. ಇಲ್ಲಿ ನಾನು ಪ್ರಮುಖವಾಗಿ ಕೇಳತಕ್ಕದ್ದು ಇವತ್ತು ಇಲ್ಲಿಯವರೆಗೂ ಇದ್ದಂಥ ರಾಜ್ಯದ ಸಾಲ 18090 ಕೋಟಿ ರೂಪಾಯಿಗಳು. ಕಳೆದ ಮೂರು ವರ್ಷಗಳಲ್ಲಿ ನಮ್ಮ ರಾಜ್ಯ ಸರ್ಕಾರ 10397.01 ಕೋಟಿ ರೂಪಾಯಿಗಳು ಸಾಲ. ಇದು ಹಿಂದಿನ ಎಲ್ಲಾ ವರ್ಷಗಳಿಂದ ಹಿಡಿದು ಇದು ಒಂದು ಹಂತವಾದರೆ, ಕಳೆದ ಮೂರು ವರ್ಷಗಳಲ್ಲಿ 10397.01 ಕೋಟಿ ರೂಪಾಯಿಗಳನ್ನು ಸಾಲವನ್ನಾಗಿ ಪಡೆಯಲಾಗಿದೆ. ಇದು ಕೇವಲ ಮೂರು ವರ್ಷದಲ್ಲಿ. ನಮ್ಮ ರಾಜ್ಯದ ಯೋಜನಾ ಗಾತ್ರ 2000-01ರಲ್ಲಿ 8506 ಕೋಟಿ ರೂಪಾಯಿ ಇದೆ. 2000-01 ನೇ ಸಾಲಿನಲ್ಲಿ ನಮ್ಮ ಸಾಲ ಮತ್ತು ಬಡ್ಡಿ 6007.75 ಕೋಟಿ ರೂಪಾಯಿಗಳು. ಈ ರೀತಿಯಾದ ಪರಿಸ್ಥಿತಿ ಇದೆ. ಅಂದರೆ ಶೇಕಡ 75ರಷ್ಟು ನಮ್ಮ ರಾಜ್ಯದ ಯೋಜನಾ ಗಾತ್ರದ 75ರಷ್ಟು ಸಾಲದ ಮೇಲೆಯೇ ನಿಂತಿದೆ.

11.30 ಎ.ಎಂ.

ಈ ರೀತಿ ವಿವೇಚನೆ ಇಲ್ಲದೆ ಸಾಲ ಮಾಡುವುದರಿಂದ ಮುಂದೆ ಅಂತರಿಕವಾದಂತಹ ರಿಸೋರ್ಸ್ ಮೊಬಿಲೈಸೇಷನ್‌ಗೆ ತೊಂದರೆ ಆಗುತ್ತದೆ. ರಿಸೋರ್ಸ್ ಮೊಬಿಲೈಸೇಷನ್ ಮಾಡುವಾಗ ಅಂತರಿಕವಾಗಿ ಕಟ್ಟುನಿಟ್ಟಿನ ಕ್ರಮವನ್ನು ಪಾಲಿಸದೇ ಇದ್ದರೆ ಬಹಳ ಗಂಭೀರವಾದಂತಹ ಪರಿಸ್ಥಿತಿಗೆ ಹೋಗಬಹುದು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ. ಇವತ್ತು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ನಮ್ಮ ರಾಜ್ಯ ಇಡೀ ದೇಶದಲ್ಲಿಯೇ 6ನೇ ಸ್ಥಾನದಲ್ಲಿದೆ. ಅದರಲ್ಲಿ ಮೊಟ್ಟಮೊದಲು ಗುಜರಾತ್, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಮತ್ತು ಕೇರಳ ನಂತರ ನಮ್ಮದು ಆರನೇ ಸ್ಥಾನದಲ್ಲಿದೆ. ನಮ್ಮ ಗ್ರೋತ್ ರೇಟ್ 1981ರಿಂದ 1990ರವರೆಗೆ 5.3 ಎಕನಾಮಿಕ್ ಡೆವಲ್‌ಮೆಂಟ್ ಇದ್ದರೆ 1991-99ರವರೆಗೆ 5.87 ಇದೆ. ಆದರೆ ಇದೇ ಹಂತದಲ್ಲಿ ಬೇರೆ ಐದು ರಾಜ್ಯಗಳ ವಿಚಾರ ಮಾಡಿದರೆ ನಮ್ಮ ರಾಜ್ಯದ ವಿಚಾರ ಗೊತ್ತಾಗುತ್ತದೆ. ಐದು ರಾಜ್ಯಗಳ ಕಂಪ್ಯಾರಿಸನ್ ಮತ್ತು ನಮ್ಮ ರಾಜ್ಯದಲ್ಲಿ ಯಾವ ರೀತಿ ಗ್ರೋತ್ ಆಗಿದೆ ಎಂದು ಕಂಪ್ಯಾರಿಸನ್ ಮಾಡಬಹುದು. ಈ ರೀತಿ ತುಲನೆ ಮಾಡಿದಾಗ ನಮ್ಮ ರಾಜ್ಯದ ಗ್ರೋತ್ ಕಡಿಮೆ ಆಗಿದೆ. ಅದಕ್ಕಾಗಿ ನಾವು ವಿಶ್ವ ಬ್ಯಾಂಕಿನಿಂದ 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇವೆ. ಮುಂದಿನ ಐದು ವರ್ಷಗಳಿಗೆ ಈ ಸಾಲವನ್ನು ಪಡೆದುಕೊಂಡಿರುವುದರಿಂದ ಪ್ರತಿ ಒಬ್ಬ ಪ್ರಜೆಯ ಮೇಲೆ 4 ಸಾವಿರ ರೂಪಾಯಿ ಸಾಲ ಬರುತ್ತದೆ. ನಾವು ಮುಂದೆ ಅಂತರಿಕವಾಗಿ ರಿಸೋರ್ಸ್ ಮೊಬಿಲೈಸೇಷನ್ ಮಾಡದೆ ಇದ್ದರೆ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ತೊಂದರೆ ಆಗಬಹುದು. ಅಂತರಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಯಾವ ಕ್ರಮವನ್ನು ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಸಂಪನ್ಮೂಲಗಳಲ್ಲಿ ಶೇಕಡಾ 75ರಷ್ಟು ನಮ್ಮ ಸ್ಯಾಲರೀಸ್ ಪೆನ್‌ಷನ್ಸ್‌ಗೆ ಹೋಗುತ್ತದೆ. ಅದಕ್ಕಾಗಿ ಇದನ್ನು ಸುಧಾರಣೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಯಾವ ಕ್ರಮವನ್ನು ಕೈಗೊಂಡಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಕಳೆದ ಮಾರ್ಚ್ ತಿಂಗಳಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರವನ್ನು ಸದನದ ಮುಂದೆ ಮಂಡಿಸಿದ್ದೆ. ಹಾಗೆ ಮಂಡಿಸಿದ್ದಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ರಾಜ್ಯದ ಚುನಾಯಿತ ಪ್ರತಿನಿಧಿಗಳು ಮತ್ತು ಶ್ರೀಸಾಮಾನ್ಯರ ಮುಂದೆ ನಾವು ವಿವರಿಸಿದ್ದೇವೆ.

> ``It is in this context the Government of Karnataka considers it necessary to share the facts about the fiscal imbalances in the State and the corrective measures needed with the Hon'ble Elected Representatives and wider public. The discussion should also address the nexus between the prudent fiscal management and economic growth."

ಮುಂದಿನ ಐದು ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ನಮ್ಮ ಸಂಪನ್ಮೂಲಗಳನ್ನು ರೂಢಿಸಬೇಕು ಮತ್ತು ಯಾವ ಪ್ರಮಾಣದಲ್ಲಿ ನಾವು ಸಾಲಗಳನ್ನು ಮಾಡಲಿಕ್ಕೆ ರಾಜ್ಯದ ಆಸೆಟ್ಸ್ ನಮಗೆ ಭದ್ರವಾದ ತಳಹದಿಯನ್ನು ಒದಗಿಸುತ್ತದೆ ಎನ್ನತಕ್ಕ ವಿಚಾರ ಹೇಳುತ್ತೇನೆ. 2000-01ರಿಂದ 2004-05ರವರೆಗೆ ಸಾಲ ಮಾಡಲಿರುವ ವಿಚಾರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ನಮ್ಮ ಮುಂದಿನ ಐದು ವರ್ಷಗಳ ಕಾಲದಲ್ಲಿ ನಾವು ಹಮ್ಮಿಕೊಳ್ಳತಕ್ಕ ಫಿಸಿಕಲ್ ಕರೆಕ್ಟೀವ್ ಮೆಷರ್ಸ್ ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳತಕ್ಕದ್ದು ಹಾಗೆಯೇ ತೆಗೆದುಕೊಳ್ಳಬೇಕಾಗಿರತಕ್ಕ ಆದ್ಯತಾ ಪಟ್ಟಿಗಳು, ಇವೆಲ್ಲವನ್ನೂ ಕೂಡ ನಮಗೆ ತೋರಿಸುತ್ತದೆ. ಈಗ ನಮ್ಮ ರಾಜ್ಯ ಯಾವ ಪ್ರಮಾಣದಲ್ಲಿ ಸಾಲ ಮಾಡುತ್ತಿದ್ದೇವೆ ಮತ್ತು ಯಾವ ಪ್ರಮಾಣದಲ್ಲಿ ಆ ಸಾಲಕ್ಕೆ ಇಂಟರೆಸ್ಟ್ ಕಟ್ಟಿಕೊಂಡು ಬರುತ್ತಿದ್ದೇವೆ ಎನ್ನುವ ವಿಚಾರದಲ್ಲಿ 11ನೇ ಹಣಕಾಸಿನ ಆಯೋಗದವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅದರಲ್ಲಿ ಯಾವ್ಯಾವ ರಾಜ್ಯ ಅದರ ಡೆಟ್ ರೀಪೇಮೆಂಟ್‌ಗೋಸ್ಕರ ಸ್ಟೇಟ್ ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್, ಒಂದು ಪರ್ಸೆಂಟೇಜ್ ಮೇಲೆ ಅವರಿಗೆ ಬೇಕಾಗಿರತಕ್ಕ ಸಾಲಕ್ಕೆ ಇಂಟರೆಸ್ಟ್ ಕೊಡುತ್ತಾರೆ ಎನ್ನುವುದನ್ನು ಉಲ್ಲೇಖ ಮಾಡಿದ್ದಾರೆ. ಆ ರಿಪೋರ್ಟ್ ನಮಗೆ ಆಧಾರ ಆಗಿದೆ. ಇದನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಹೊರಡಿಸಿರತಕ್ಕದ್ದು. ಅದರ ಪ್ರಕಾರ ಆಂಧ್ರ ಪ್ರದೇಶದಲ್ಲಿ 1998-99ರಲ್ಲಿ ಶೇಕಡಾ 20.29 ಇಂಟರೆಸ್ಟ್ ರೇಟ್ - ಇದು ಸ್ಟೇಟ್ ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟನ್ನು ಕಂಪೇರ್ ಮಾಡಿದಾಗ ಇರುವುದು. ಗುಜರಾತ್ 18.17 ಪರ್ಸೆಂಟ್, ಕರ್ನಾಟಕ 17.48 ಪರ್ಸೆಂಟ್, ಕೇರಳ ನಮಗಿಂತ ಸಣ್ಣ ರಾಜ್ಯವಾಗಿದ್ದರೂ 27.13 ಪರ್ಸೆಂಟ್ ಇದೆ. ಉತ್ತರ ಪ್ರದೇಶ

ನಮಗಿಂತ ಬಹಳ ದೊಡ್ಡ ರಾಜ್ಯ 27.97 ಪರ್ಸೆಂಟ್. ವೆಸ್ಟ್ ಬೆಂಗಾಲ್ ಕಮ್ಯುನಿಸ್ಟ್ ಸಿದ್ಧಾಂತವನ್ನು ರೂಢಿ ಮಾಡಿಕೊಂಡಿರುವಂತಹ ರಾಜ್ಯ. ಅಲ್ಲಿ 26.19 ಪರ್ಸೆಂಟ್ ಮತ್ತು ಆಲ್ ಇಂಡಿಯಾ ಆವರೇಜ್ 22.98 ಪರ್ಸೆಂಟ್ ಇದೆ. ಆದ್ದರಿಂದ ಧೃಡವಾಗಿ ನಾವು ಈ ಸಭೆಗೆ ಮತ್ತು ರಾಜ್ಯದ ಜನತೆಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕಿದೆ. ಏಕೆಂದರೆ ನಮ್ಮ ಇತಿಮಿತಿಗಳನ್ನು ನಾವು ಲೆಕ್ಕ ಹಾಕಿಕೊಂಡಿದ್ದೇವೆ. ಆ ಇತಿಮಿತಿಗಳ ಚೌಕಟ್ಟಿನಲ್ಲಿ ನಾವು ಸಾಲವನ್ನು ತರತಕ್ಕದ್ದು ಆಗಲೀ ಮತ್ತು ಸಾಲದ ಮೇಲಿನ ಬಡ್ಡಿ ಸೀಮಿತಗೊಳಿಸತಕ್ಕ ವಿಚಾರವನ್ನು ಬಹಳ ಗಂಭೀರವಾಗಿ ಗುರುತಿಸಿದ್ದೇವೆ. ನಾವು ಗಂಭೀರವಾದ ಹಾದಿಯಲ್ಲಿ ಹೋಗತಕ್ಕದ್ದು ಇದರ ಬಗ್ಗೆ 2-3 ವಿಚಾರಗಳಲ್ಲಿ ಸಾಕಷ್ಟು ಧೃಡತೆ ಒದಗಿಸತಕ್ಕದ್ದು ಹಾಗೆ ಎಂದು ಭಾವನೆ ಮಾಡುತ್ತೇನೆ. ಸಂಪನ್ಮೂಲಗಳನ್ನು ಒದಗಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು. ನಾವು ಸಂಪನ್ಮೂಲಗಳನ್ನು ವೃದ್ಧಿಮಾಡಲಿಕ್ಕೆ ಸದನದ ಮುಂದೆ ಹಲವಾರು ಬಾರಿ ಬಂದಿದ್ದೇವೆ. ಆ ಸಂಪನ್ಮೂಲಗಳನ್ನು ನಾವು ಹಲವಾರು ಇಲಾಖೆಗಳ ಮೂಲಕ ಮಾಡಬೇಕಾಗಿರುವುದು ಇದೆ. ಈಗ ಬರ ಬಂದಿರುವುದರಿಂದ ಲ್ಯಾಂಡ್ ರೆವಿನ್ಯೂನಿಂದ ಸಂಪನ್ಮೂಲ ಕೊಡುವ ಪ್ರಶ್ನೆ ಬರುವುದಿಲ್ಲ. ವಾಟರ್ ರೇಟ್‌ನ್ನು ನಾವು ಕಲೆಕ್ಟ್ ಮಾಡುತ್ತಿಲ್ಲ. ಸಹಸ್ರಾರು ಕೋಟಿ ರೂಪಾಯಿಗಳನ್ನು ನಾವು ಕೃಷ್ಣಾ ಬೇಸಿನ್ ಅಭಿವೃದ್ಧಿ ಮಾಡಲು ಖರ್ಚು ಮಾಡುತ್ತಿದ್ದೇವೆ. ಆದರೆ ಅದರ ಪ್ರತಿಫಲ ಎಲ್ಲರಿಗೂ ಸಿಗುತ್ತಿಲ್ಲ. ಶೇಕಡಾ 60-70 ಭಾಗಕ್ಕೆ ನೀರಾವರಿ ಯೋಜನೆಗಳ ಪ್ರತಿಫಲ ಸಿಗುತ್ತಿಲ್ಲ. ಆದರೆ ಒಟ್ಟಾರೆ ಕರ್ನಾಟಕದಲ್ಲಿ ಪ್ರತಿಫಲ ಸಿಗುತ್ತದೆ. ಅದನ್ನು ಸಮಾನಾಂತರವಾಗಿ ಹಂಚಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಸದನದಲ್ಲಿ ಸಂಪನ್ಮೂಲ ವೃದ್ಧಿ ಮಾಡಲಿಕ್ಕೆ ತರುವಂತಹ ಕ್ರಮಗಳಿಗೆ ತಮ್ಮಗಳ ಸಹಕಾರ, ಸಿಗುತ್ತದೆ ಎನ್ನುವ ಭಾವನೆ ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಪರಿಸ್ಥಿತಿ ವಿಚಾರ ಹೇಳಿದರು. ರಾಜ್ಯದ ಆರ್ಥಿಕ ಮೊಬಿಲೈಸೇಷನ್ ಮಾಡುವಾಗ ನಾನು ಹೇಳುವುದು ಏನೆಂದರೆ ಕೆಲವು ಇಂಡಸ್ಟ್ರೀಗಳಿಗೆ ಕೊಟ್ಟಿರುವಂತಹ ಎಕ್ಸಂಪ್ಷನ್ ವಿಚಾರದಲ್ಲಿ ಮತ್ತೆ ಯೋಚಿಸಬೇಕು. ಈಗ ನೀವು ಕೆಲವೊಂದು ಇಂಡಸ್ಟ್ರೀಗಳಿಗೆ ಎಕ್ಸಂಪ್ಷನ್ ಕೊಟ್ಟಿದ್ದೀರಿ. ನನ್ನ ಹತ್ತಿರ 8-10 ಇಂಡಸ್ಟ್ರೀಗಳಿಗೆ ಎಕ್ಸಂಪ್ಷನ್ ಕೊಟ್ಟ ಲಿಸ್ಟ್ ಇದೆ. ತಾವು ಇಂಡಸ್ಟ್ರೀಗಳು ಹೆಚ್ಚು ಬರಬೇಕೆಂದು ಎನ್‌ಕರೇಜ್ ಮಾಡುವ ದೃಷ್ಟಿಯಿಂದ ಎಕ್ಸಂಪ್ಷನ್ ಕೊಟ್ಟಿದ್ದೀರಿ. ಇದರಿಂದಾಗಿ ನಮ್ಮ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷ ಮೂರು ಸಾವಿರ ಕೋಟಿ ರೂಪಾಯಿ ರಿಸೋರ್ಸ್ ಮೊಬಿಲೈಸೇಷನ್‌ನಲ್ಲಿ ಕಡಿಮೆ ಆಗುತ್ತಿದೆ. ಪರ್ಚೇಸ್ ಟ್ಯಾಕ್ಸ್ ಇರಬಹುದು, ಸೇಲ್ಸ್ ಟ್ಯಾಕ್ಸ್ ಇರಬಹುದು ಅಥವಾ ಬೇರೆ ತರಹ ಟ್ಯಾಕ್ಸ್ ಇರಬಹುದು. ನೀವು 8-10 ಇಂಡಸ್ಟ್ರೀಗಳಿಗೆ ಎಕ್ಸಂಪ್ಷನ್ ಕೊಟ್ಟಿರುವುದರಿಂದ ಪ್ರತಿ ವರ್ಷ ನಮ್ಮ ರಿಸೋರ್ಸ್ ಮೊಬಿಲೈಸೇಷನ್‌ನಲ್ಲಿ 3 ಸಾವಿರ

ರೂಪಾಯಿ ಕಡಿಮೆ ಆಗಿದೆ. ಅದನ್ನು ಯಾವ ರೀತಿ ಮೊಬಿಲೈಸ್ ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ನನಗೆ ಬಂದ ಮಾಹಿತಿ ಪ್ರಕಾರ ಮಾನ್ಯ ಯಶವಂತ ಸಿಹ್ನಾ ಅವರು ದೇಶದ ಎಲ್ಲಾ ಆರ್ಥಿಕ ಸಚಿವರ ಒಂದು ಸಭೆಯನ್ನು ಮಾಡಿದ್ದಾರೆ. ಆ ಸಂದರ್ಭದಲ್ಲಿ ಜನವರಿ 2000ರಿಂದ ಯಾವುದೇ ರಾಜ್ಯಗಳು ಇನ್‌ಸೆಂಟೀವ್ ಕೊಡಬಾರದು. ಆ ರೀತಿ ಇನ್‌ಸೆಂಟೀವ್ ಕೊಡುವುದರಿಂದ ಬಹಳಷ್ಟು ತೊಂದರೆ ಆಗಿ ರಾಜ್ಯಗಳ ರಿಸೋರ್ಸ್ ಮೊಬಿಲೈಸೇಷನ್ ಹಿಂದೆ ಬೀಳುತ್ತದೆ. ಆದ್ದರಿಂದ ಇನ್‌ಸೆಂಟೀವ್ ಕೊಡಬಾರದು ಎಂದು ಒಂದು ರೆಸಲ್ಯೂಷನ್ ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ಅದು ನಿಜವೇ ಎಂಬುದು ನನ್ನ ಪ್ರಶ್ನೆ. ನಾವು ಹೊಸದಾಗಿ ಕಂಪನಿಗಳಿಗೆ ಎಕ್ಸಂಪ್ಷನ್ ಕೊಡುವುದರಿಂದ ಎಂಪ್ಲಾಯ್‌ಮೆಂಟ್ ಜನರೇಷನ್ ಆಗಬಹುದು. ಆದರೆ ಇದರಿಂದ ನಮ್ಮ ರಾಜ್ಯದವರಿಗೆ ಎಂಪ್ಲಾಯ್‌ಮೆಂಟ್ ಭರವಸೆ ಇಲ್ಲ ಎನ್ನುವಂತಹ ಕೂಗು ಇದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕಾದ ಅಗತ್ಯ ಇದೆ. ಅದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಮತ್ತೊಂದು ಬಹಳ ಮಹತ್ವವಾದ ಪ್ರಶ್ನೆಯೆಂದರೆ, ಕಳೆದ ಸಲ ತಾವು 'ಕರ ಸಮಾಧಾನ ಯೋಜನೆ' ಯನ್ನು ಘೋಷಿಸಿದಿರಿ. ಸದರಿ ಯೋಜನೆಯಡಿ ಅಬ್ಕಾರಿ ಇಲಾಖೆಯಿಂದ ಸರ್ಕಾರಕ್ಕೆ ಸುಮಾರು 250 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಬಾಕಿ ಹಣ ಬರಬೇಕಾಗಿರುತ್ತದೆ. ಆದರೆ, ಇವೊತ್ತಿನವರೆವಿಗೂ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಇದಕ್ಕಾಗಿ ತೊಂಭತ್ತು ದಿವಸಗಳ ಕಾಲ ನಿಗದಿಪಡಿಸಲಾಗುತ್ತದೆಂದು ನಾವು ತಿಳಿಸಿದ್ದರೂ ಇನ್ನೂ ಆ ಕುರಿತ ಅಧಿಸೂಚನೆ (ನೋಟಿಫಿಕೇಷನ್) ಹೊರಬಿದ್ದಿಲ್ಲ. ಕಳೆದ ಸಲದ ತಮ್ಮ ಆಯವ್ಯಯ ಭಾಷಣದಲ್ಲಿ ಯೋಜನೆ ಕುರಿತು ಪ್ರಕಟಿಸಿದ್ದರೂ ಇನ್ನೂ ಏಕೆ ಜಾರಿಯಾಗಿರುವುದಿಲ್ಲ? ನನ್ನ ಬಳಿ ಒಂದು ಪಟ್ಟಿ ಇದ್ದು ಅದರ ಪ್ರಕಾರ ಅಬ್ಕಾರಿ ಇಲಾಖೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಪ್ರತಿ ವರ್ಷವೂ ಕಡಿಮೆಯಾಗುತ್ತಿದೆ. ಎಂಬುದು ಗೊತ್ತಾಗುತ್ತದೆ ಕಳೆದ ವರ್ಷಕ್ಕೂ ಹಾಗೂ ಅದರ ಹಿಂದಿನ ವರ್ಷಕ್ಕೂ ಹೋಲಿಸಿದರೆ ಅಬ್ಕಾರಿ ವಲಯದಿಂದ ಬರುವ ಸಂಪನ್ಮೂಲದ ಪ್ರಮಾಣ ಕಡಿಮೆಯಾಗುತ್ತಿರುವ ಅಂಕಿ-ಸಂಖ್ಯೆಗಳಿದ್ದು, ಸಂಪನ್ಮೂಲ ಹೆಚ್ಚಿಸುವ ದಿಶೆಯಲ್ಲಿ ಸರ್ಕಾರ ಚಿಂತನೆ ನಡೆಸಬೇಕಾದ್ದು ಬಹಳ ಮುಖ್ಯ. ಬಹಳ ಪ್ರಮುಖವಾದ ಇಲಾಖೆಯಿಂದಲೇ ಸರ್ಕಾರಕ್ಕೆ ಬರಬೇಕಾದ ಆದಾಯ ಪ್ರತಿ ವರ್ಷ ಕಡಿಮೆಯಾಗುತ್ತಿದ್ದರೆ ಮುಂಬರುವ ದಿನಗಳಲ್ಲಿ ನಮ್ಮ ರಾಜ್ಯ ಆರ್ಥಿಕವಾಗಿ ದುಸ್ಥಿತಿಗಿಳಿಯಬೇಕಾಗುತ್ತದೆ. ಆರ್ಥಿಕ ಸ್ಥಿತಿ-ಗತಿಗೆ ಹೋಲಿಸಿದರೆ ನಮ್ಮ ರಾಜ್ಯ ದೇಶದಲ್ಲಿ ಆರನೇ ಸ್ಥಾನದಲ್ಲಿದ್ದು, ಇನ್ನೂ ಕೆಳಮಟ್ಟಕ್ಕೆ ಹೋಗಬಾರದೆಂಬುದೇ ನನ್ನ ಕಳಕಳಿಯಾಗಿದೆ. ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ವೀರಪ್ಪ ಮೊಯಿಲಿಯವರ ನೇತೃತ್ವದಲ್ಲಿ ರಚಿಸಲಾಗಿದ್ದ 'ರಾಜ್ಯ ತೆರಿಗೆ ಸುಧಾರಣಾ ಆಯೋಗವು' ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿದ್ದು ಅಬ್ಕಾರಿ ಇಲಾಖೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿರುವ ಸಾವಿರಾರು ಕೋಟಿ ರೂಪಾಯಿಗಳು ಸೋರಿಹೋಗುತ್ತಿರುವುದನ್ನು ವರದಿಯಲ್ಲಿ ಪ್ರಸ್ತಾಪಿಸಿರುವುದರಿಂದ, ಸಂಪನ್ಮೂಲ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ ಎಂಬುದಕ್ಕೆ ಸ್ಪಷ್ಟೀಕರಣ ಕೊಡಬೇಕು.

43-A

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಉದ್ಯಮಗಳಿಗೆ ಮಾರಾಟ ತೆರಿಗೆ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಸಬ್ಸಿಡಿ ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ರಾಜ್ಯದ ಜನತೆ ಮೇಲೆ ದೊಡ್ಡ ಹೊರೆ ಹೊರಿಸುತ್ತಿದ್ದೀರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಅದೇ ಹುರುಪಿನಲ್ಲಿ ರಾಜ್ಯದ ಆರ್ಥಿಕ ಸ್ಥಿತಿಗತಿ ಕುರಿತು ಮಾತನಾಡಿ ನಮ್ಮ ರಾಜ್ಯ ರಾಷ್ಟ್ರದಲ್ಲಿ ಆರನೇ ಸ್ಥಾನದಲ್ಲಿದೆ ಎಂದು ತಿಳಿಸಿದ್ದಾರೆ. ಯಾವುದೇ ಒಂದು ರಾಜ್ಯ ಅಭಿವೃದ್ಧಿ ಪಕ್ಷದಲ್ಲಿರುವುದಕ್ಕೆ ಹಲವಾರು ಮಾನದಂಡಗಳಿದ್ದು, ಅದರಲ್ಲಿ ಉದ್ಯಮಗಳು ಯಾವ ಪ್ರಮಾಣದಲ್ಲಿ ರಾಜ್ಯಗಳಿಗೆ ಬರುತ್ತಿವೆ ಎಂಬುದೂ ಕೂಡ ಮೂಲಭೂತವಾದ ಒಂದು ಮಾನದಂಡವಾಗಿದೆ. ಉದ್ಯಮಗಳು ಒಂದು ರಾಜ್ಯದ ಸಂಪನ್ಮೂಲವನ್ನು ಹೆಚ್ಚಿಸುತ್ತವಲ್ಲದೆ, ಆ ರಾಜ್ಯದಲ್ಲಿ ಉದ್ಯೋಗವನ್ನೂ ಕೂಡ ಸೃಷ್ಟಿಸುತ್ತದೆ, ಅದಕ್ಕೆ ತಕ್ಕಂತೆ ರಾಜ್ಯದ ಬೊಕ್ಕಸಕ್ಕೆ ತೆರಿಗೆಗಳೂ ಕೂಡ ಪಾವತಿಯಾಗುತ್ತದೆ. ಆದುದರಿಂದ, ಜನವರಿ 2000ರಿಂದ ಎಲ್ಲಾ ರಾಜ್ಯ ಸರ್ಕಾರಗಳೂ ಮಾರಾಟ ತೆರಿಗೆಯನ್ನು ವಿಧಿಸಬಾರದೆಂದು ಹೇಳಿದ್ದರಿಂದ ನಾವೂ ಕೂಡ ವಿಧಿಸದೆ ಹಾಗೇ ಬಿಟ್ಟಿದ್ದೇವೆ. ಇದಕ್ಕೆ ಸೂಕ್ತವಾದ ಸರ್ಕಾರಿ ಆಜ್ಞೆ ಇಷ್ಟರಲ್ಲಿಯೇ ಹೊರಡಲಿದೆ. ಇನ್ನು ಮೌಲ್ಯವರ್ಧಿತ ತೆರಿಗೆ (ವ್ಯಾಲ್ಯೂ ಆ್ಯಡೆಡ್ ಟ್ಯಾಕ್ಸ್) ಗೆ ಸಂಬಂಧಿಸಿದಂತೆ ಹೇಳುವುದಾದರೆ, 2002ನೇ ಇಸವಿ ಮಾರ್ಚಿ ತಿಂಗಳಿನಿಂದ ಸದರಿ ತೆರಿಗೆ ವಿಧಿಸಲು ಎಲ್ಲಾ ರಾಜ್ಯ ಸರ್ಕಾರಗಳೂ ಕೂಡ ಈಗಾಗಲೇ ತಮ್ಮ ಒಪ್ಪಿಗೆಯಿತ್ತಿರುವುದರಿಂದ, ಈ ವ್ಯವಸ್ಥೆ ಜಾರಿಗೆ ಬಂದಲ್ಲಿ ಇಡೀ ದೇಶದಲ್ಲಿಯೇ 'ಏಕತೆಯ ತೆರಿಗೆ ಹಾಲ' ಸೃಷ್ಟಿಯಾಗುತ್ತದೆ ಮತ್ತು ರಾಜ್ಯ-ರಾಜ್ಯಗಳ ನಡುವೆ ಪೈಪೋಟಿಯಾಗುವುದು ಬಹಳ ಮಟ್ಟಿಗೆ ನಿಲ್ಲುತ್ತದೆ ಎಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಹಾಗೂ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಈ ರಾಜ್ಯ ಸರ್ಕಾರ ಅಬ್ಕಾರಿ ವಲಯವೊಂದರಲ್ಲಿಯೇ ಅಲ್ಲದೆ ವಾಣಿಜ್ಯ ತೆರಿಗೆಗಳಲ್ಲಿನ ವಸೂಲಾತಿ ಪ್ರಮಾಣವನ್ನು ಸಹ ಅಧಿಕಗೊಳಿಸಬೇಕೆಂಬುದೇ ನಮ್ಮ ಗುರಿ ಹಾಗೂ ಉದ್ದೇಶವಾಗಿದೆ. ಅಬ್ಕಾರಿ ಇಲಾಖೆಯಿಂದ ಪ್ರತಿ ವರ್ಷವೂ ಸರ್ಕಾರಕ್ಕೆ ಬರುತ್ತಿರುವ ಆದಾಯದ ಪ್ರಮಾಣ ಕಡಿಮೆಯಾಗುತ್ತಿದೆಯೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಗೆ ಆ ತೀರ್ಮಾನಕ್ಕೆ ಬಂದಿದ್ದಾರೋ ಗೊತ್ತಿಲ್ಲ. ನಾನು ಆಯವ್ಯಯ ಪತ್ರವನ್ನು ಮಂಡಿಸುವಂಥ ಸಂದರ್ಭದಲ್ಲಿ ಘೋಷಿಸಿದಂಥ ಅಂಕಿ-ಅಂಶಗಳೇ ಆಧಾರವಾಗಿ ಪಡೆಯುವಂಥಾದ್ದಾಗಿದೆ. ಆ ಅಂಕಿ-ಅಂಶಗಳ ಒಟ್ಟಾರೆ ದೃಷ್ಟಿಯನ್ನು ತಾವು ಗಮಿಸುವುದಾದರೆ ತೆರಿಗೆ ಸಂಗ್ರಹಣೆಯಲ್ಲಿ ಪ್ರಗತಿದಾಯಕ ಹೆಚ್ಚಳವಾಗಿದೆ ಎಂಬ ಸ್ಪಷ್ಟ ಸೂಚನೆಯನ್ನು ತೋರಿಸುತ್ತದೆ. ಇನ್ನು 'ಕರ ಸಮಾಧಾನ ಯೋಜನೆ' ಕುರಿತಂತೆ ಪ್ರಸ್ತಾಪಿಸಿರುವುದಕ್ಕೆ ಹೇಳುವುದಾದರೆ, ಅಬ್ಕಾರಿ ಇಲಾಖೆಯಲ್ಲಿ 1947-48ನೇ ಸಾಲಿನಿಂದಲೇ ಮುಂದುವರೆದುಕೊಂಡು ಬಂದಿರುವ ಅರಿಯರ್ಸ್ ಇದಾಗಿದೆಯೇ ಹೊರತು ಕೇವಲ ಇತ್ತೀಚಿನ ವರ್ಷಗಳಲ್ಲಿ ಕ್ರೋಢೀಕೃತವಾಗಿರುವ

ಅರಿಯರ್ಸ್ ಅಲ್ಲ. 180 ಕೋಟಿ ರೂಪಾಯಿಗಳಷ್ಟಿದ್ದ ಅಸಲು ಹಣಕ್ಕೆ ಬಡ್ಡಿ ಹಣ ಸೇರಿ 250 ಕೋಟಿ ರೂಪಾಯಿಗಳು ಇಲ್ಲವೇ ಇನ್ನೂ ಜಾಸ್ತಿಯಾಗಿರಬಹುದು. ಈ ಕುರಿತು ತಾಂತ್ರಿಕ ತೊಂದರೆಗಳಿರುವುದರಿಂದ ನಾವು "ಕರ ಸಮಾಧಾನ" ಯೋಜನೆಯನ್ನು ಜಾರಿಗೊಳಿಸಿದರೂ ಸಹ ಕೋರ್ಟುಗಳ ನಾನಾ ರೀತಿಯ ಆದೇಶಗಳಿಂದ ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೂ ಇರುವ ತೊಂದರೆಗಳನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ತಾವು ಯೋಜನೆಯನ್ನು ಜಾರಿಗೊಳಿಸಿ ತೊಂಭತ್ತು ದಿವಸಗಳ ಅವಧಿಯನ್ನು ನಿಗಧಿಪಡಿಸಬೇಕು. ಈ ಕುರಿತ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕು.

ಶ್ರೀ ಎಸ್.ಎಂ. ಕೃಷ್ಣ :— ಯೋಜನೆಯನ್ನು ಪ್ರಕಟಿಸಿದ ತೊಂಭತ್ತು ದಿವಸದೊಳಗೆ ಎಂಬುದು ನನ್ನ ಘೋಷಣೆ. ಆ ಘೋಷಣೆ ಹಾಗೆಯೇ ಇದೆ. ಸದರಿ ಘೋಷಣೆಯನ್ನು ಅನುಷ್ಠಾನಕ್ಕೆ ತರಲು ಕೆಳಮಟ್ಟದಲ್ಲಿ ಹಲವಾರು ಎಡರು-ತೊಡರುಗಳಿದ್ದು, ಆ ಎಡರು-ತೊಡರುಗಳು ಕೋರ್ಟುಗಳ ಆದೇಶಗಳಾಗಿರಬಹುದು ಮತ್ತು ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟದ್ದಾಗಿರಬಹುದು. ಆದುದರಿಂದ, ಈ ಎಲ್ಲಾ ಸಮಸ್ಯಗಳನ್ನು ಪರಿಹರಿಸಿ ಯೋಜನೆಯನ್ನು ಸಂಬಂಧಪಟ್ಟವರ ಮುಂದಿಟ್ಟು ಒಂದಿಷ್ಟು ಹಣವನ್ನು ವಸೂಲು ಮಾಡಬೇಕೆಂಬುದು ನಮ್ಮ ನಿರೀಕ್ಷೆಯಾಗಿದೆ.

ಶ್ರೀ ಸಿ. ಭೈರೇಗೌಡ :— ಕಳೆದ ಮೂರು ವರ್ಷಗಳ ಅಂತರಿಕ ಸಾಲ ಮತ್ತು ವಿದೇಶಿ ಸಾಲವನ್ನು ಲೆಕ್ಕ ಹಾಕಿದರೆ ಸರಿಸುಮಾರು 10,300 ಕೋಟಿ ರೂಪಾಯಿಗಳಷ್ಟು ಹಣದ ಸಾಲ ಮಾಡಿರುವುದು ಗಮನಕ್ಕೆ ಬರುತ್ತದೆ ಹಾಗೂ ಇದೇ ಗತಿಯಲ್ಲಿ ಸಂಪನ್ಮೂಲ ಕ್ರೋಢೀಕರಣವಾಗುತ್ತಿಲ್ಲ. ಇದೇ ರೀತಿ ಮುಂದುವರೆದರೆ ರಾಜ್ಯ 'ಡೆಟ್ ಟ್ರ್ಯಾಪ್‌ಗೆ' ಒಳಪಡುವುದಿಲ್ಲವೆಂಬುದಕ್ಕೆ ಸರ್ಕಾರ ಖಾತರಿ ನೀಡುತ್ತದೆಯೇ?

ಶ್ರೀ ಎಸ್.ಎಂ. ಕೃಷ್ಣ :— 'ಡೆತ್ ಟ್ರ್ಯಾಪ್‌ಗೆ' ಈ ರಾಜ್ಯ ಸಿಗಬಾರದೆಂತಲೇ ನಾವು ಶ್ವೇತ ಪತ್ರವನ್ನು ಹೊರಡಿಸಿರುವುದು. ಅಲ್ಲದೆ, 'ಮಿಡ್ ಟರ್ಮ್ ಫಿಸ್ಕಲ್ ಪ್ಲಾನ್' ತಯಾರಿಸಿದ್ದು, ಇವೆರಡೂ ಕೂಡ ನಮ್ಮ ರಾಜ್ಯ 'ಡೆತ್ ಟ್ರ್ಯಾಪ್'ಗೆ ಸಿಗದಿರುವಂಥ ಒಂದು ಭೂಮಿಕೆಯನ್ನು ಸೃಷ್ಟಿಸಬೇಕೆಂಬ ದೃಷ್ಟಿಯಿಂದ ಇದೊಂದು ರೀತಿಯ ಮಾರ್ಗಸೂಚಿಯಾಗಿದ್ದು, ಈ ಮಾರ್ಗಸೂಚಿಯನ್ನು ನಾವು ಅನುಸರಿಸಿಕೊಂಡು ಹೋದರೆ ಯಾರೂ ಕೂಡ 'ಡೆಟ್ ಟ್ರ್ಯಾಪ್'ಗೆ ಕರ್ನಾಟಕ ರಾಜ್ಯ ಸಿಗುತ್ತದೆಂದು ಅನುಮಾನ ಪಡಬೇಕಾಗಿಲ್ಲ.

ಶ್ರೀ ವೈ.ಕೆ. ರಾಮಯ್ಯ :— ಸನ್ಮಾನ್ಯ ಅಧ್ಯಕ್ಷರೆ, ಆಧುನಿಕ ಸರ್ಕಾರಗಳ ಸಾಮಾಜಿಕ ಹೊಣೆಗಾರಿಕೆಯಿಂದ ನಮ್ಮ ಸಂಪನ್ಮೂಲದ ಮೂಲ ಬತ್ತಿಹೋಗುತ್ತಿದೆ ಎನ್ನುವುದಕ್ಕೆ ಮುಖ್ಯಮಂತ್ರಿಗಳು ನಿಖರವಾದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಸುಸ್ತಿದಾರರುಗಳನ್ನು ಪ್ರೋತ್ಸಾಹಿಸುತ್ತಿರುವುದಲ್ಲದೆ, ಇನ್ನಿತರ ಕಾರಣಗಳಿಗಾಗಿ ನಮ್ಮ ಸಂಪನ್ಮೂಲದ ಕ್ಷೀಣೀಕರಣ ಕಡಿಮೆಯಾಗುತ್ತಿದೆಯೆಂದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಇದನ್ನು ಒಪ್ಪಿಕೊಂಡು ಇದಕ್ಕೆ ಪರ್ಯಾಯವಾಗಿರುವ ಏನಾದರೊಂದು ವ್ಯವಸ್ಥೆ ಮಾಡುವುದಕ್ಕೆ ತಮಗೆ ಸಾಧ್ಯವಿದೆಯೇ? ಆ ದಿಸೆಯಲ್ಲಿ ಏನಾದರೂ ಚಿಂತನೆ ನಡೆದಿದೆಯೇ? ಇಲ್ಲದಿದ್ದರೆ, ಅಭಿವೃದ್ಧಿ ಕಾರ್ಯಗಳು ವಿಧಿಯಿಲ್ಲದೆ ಕುಂಠಿತಗೊಳ್ಳಬೇಕಾಗುತ್ತದೆ. ಇವೊತ್ತಿನ ಅಭಿವೃದ್ಧಿ ಕಾರ್ಯಗಳೆಲ್ಲವೂ ಸಾಲದ ಮುಖಾಂತರವೇ ನಡೆಯುತ್ತಿವೆ. ನಮ್ಮದೇ ಆದ ಸಂಪನ್ಮೂಲದ ಮೂಲ ಬತ್ತಿಹೋಗಿದೆ. ವಿಶ್ವಬ್ಯಾಂಕಿನ ಸಾಲ, ಹುಡ್ಕೋ ಸಾಲ, ನಬಾರ್ಡ್ ಸಾಲ ಹೀಗೆ ಸಾಲದ ಮುಖಾಂತರವೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವಂಥ ಪರಿಸ್ಥಿತಿ ಈಗಾಗಲೇ ಸೃಷ್ಟಿಯಾಗಿದೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ನಮ್ಮ ಸಂಪನ್ಮೂಲ ಕ್ಷೀಣೀಕರಣದ ಮೂಲಕ ಸಂಪೂರ್ಣ ಬತ್ತಿಹೋಗುವ ಮುನ್ನ ಆ ಕುರಿತು ನಾವು ಎಚ್ಚರಿಕೆ ವಹಿಸಬೇಕಾಗಿದೆ. ಆದಕಾರಣ ಪರ್ಯಾಯ ವ್ಯವಸ್ಥೆ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ? ಚಿಂತನೆ ನಡೆಸಿದಲ್ಲಿ, ನಮ್ಮ ಗಮನಕ್ಕೆ ತರಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕು ಆ ಮೂಲಕ ಜನಪದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಸರ್ಕಾರದ ನಿರೀಕ್ಷೆ. 2000 ರಿಂದ 2005ನೇ ಇಸವಿಯವರೆಗೆ ನಾವು ಯಾವ ಹಾದಿಯನ್ನು ತುಳಿಯುತ್ತೇವೆ ಎಂಬ ಬಗ್ಗೆ ಸ್ಪಷ್ಟವಾದಂಥ ರೂಪುರೇಖೆಗಳನ್ನು ಹೇಳುತ್ತಿದ್ದೇನೆ. ಇದರ ಜೊತೆಗೆ ಸಂಪನ್ಮೂಲಗಳನ್ನು ವೃದ್ಧಿಗೊಳ್ಳಲು ಪ್ರತಿ ವರ್ಷ ನಮ್ಮ ಬಜೆಟ್ through the instrumentality of the State ಸದನದ ಮುಂದೆ ಬರುತ್ತದೆ ಆ ಸಂಪನ್ಮೂಲಗಳನ್ನು ಕ್ಷೀಣೀಕರಿಸಲು ಸದನದ ಸಂಪೂರ್ಣ ಸಹಕಾರವನ್ನು ನಾನು ಕೋರುತ್ತಿದ್ದೇನೆ. ಆ ಮೂಲಕ ಜನಪದ ಕೆಲಸಗಳನ್ನು ಮಾಡತಕ್ಕದಲ್ಲದೆ ನಾವು ತೆಗೆದುಕೊಳ್ಳುವ ಸಾಲದ ಪ್ರಮಾಣವನ್ನು ಕಡಿಮೆ ಮಾಡಬಹುದು, ನಮ್ಮ ಸಂಪನ್ಮೂಲಗಳ ಆಧಾರದ ಮೇಲೆ ನಾವು ಜನಪರ ಕೆಲಸಗಳನ್ನು ತೆಗೆದುಕೊಳ್ಳಲು ಸಾಧ್ಯವಾಗತಕ್ಕ ಪರಿಸ್ಥಿತಿ 2005ನೇ ಇಸವಿಯಲ್ಲಿ ನಿರ್ಮಾಣ ಮಾಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿರುತ್ತದೆ.